**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 8/2024**

**ಪಿ.ಡಬ್ಲ್ಯು:11 ಸಿಡಬ್ಲ್ಯು:3**

ಸಾಕ್ಷಿಯ ಹೆಸರು : ಬಸವರಾಜಪ್ಪ

ತಂದೆಯ ಹೆಸರು : ಸಣ್ಣ ಮಾರೆಪ್ಪ

ವಯಸ್ಸು : 62 ವರ್ಷ

ವೃತ್ತಿ : ವ್ಯವಸಾಯ

ವಾಸಸ್ಥಳ : ಮುರಾರಿಪುರ ಗ್ರಾಮ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: **04-12-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

ನನಗೆ ಚಾಸಾ-**6** ರವರ ಪರಿಚಯ ಇದ್ದಾರೆ. ಚಾಸಾ-**2** ರವರು ಪರಿಚಯ. ಆರೋಪಿ ಮತ್ತು ಆತನ ಹೆಂಡತಿ ಹುಲೆಮ್ಮ ಪರಿಚಯ. ಹುಲೆಮ್ಮ ಈಗ ಮರಣ ಹೊಂದಿದ್ದಾಳೆ. ಅವಳು ತನ್ನ ಮನೆಯಲ್ಲಿ ಮರಣ ಹೊಂದಿದ್ದಳು. ಅವಳು ಹೇಗೆ ಮತ್ತು ಯಾವ ಕಾರಣದಿಂದಾಗಿ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಪೊಲೀಸರು ನನ್ನನ್ನು ಪಂಚನೆಂದು ಎಲ್ಲಿಯೂ ಕರೆದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ. ನಾನು ಈಗ ನೋಡುತ್ತಿರುವ ಕೃತ್ಯ ಸ್ಥಳ ಪಂಚನಾಮೆ, ನಕಾಶೆ ಮತ್ತು ಶವ ಪಂಚನಾಮೆ, ನೋಟಿಸ್ ಗಳಲ್ಲಿ ನನ್ನ ಸಹಿ ಇದೆ. ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ- **10, 11,13** ಮತ್ತು **14** ಎಂದು ಗುರುತಿಸಲಾಗಿದೆ. ಅವುಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ-**10**(ಬಿ) , **11**(ಬಿ), **13**(ಬಿ) ಮತ್ತು **14**(ಬಿ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಪೊಲೀಸ್ ನೋಟಿಸ್ ನಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸ್ ನ್ನು ನಿಪಿ-**15** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**15**(ಎ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗಳಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ-**10** ಮತ್ತು **13** ರಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ. ಈಗ ಸುಮಾರು ಒಂದು

ವರ್ಷದ ಹಿಂದೆ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ನಿಪಿ-**10** , **11**, **13** ರಿಂದ **15** ರ ದಾಖಲೆಗಳಲ್ಲಿ ನನ್ನ ಸಹಿಗಳನ್ನು ಪಡೆದಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).**

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

ದಿಃ **28-09-2023** ರಂದು ನನ್ನನ್ನು ಮತ್ತು ಚಾಸಾ-**2** ರವರನ್ನು ಪೊಲೀಸರು ಪಂಚರೆಂದು ಮುರಾರಿ ಪುರ ಗ್ರಾಮದಲ್ಲಿರುವ ಮೃತ ಹುಲೆಮ್ಮನ ಮನೆಗೆ ನೋಟಿಸ್ ನೀಡಿ ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ-**6** ಹಾಜರಿದ್ದು , ಮೃತ ಹುಲೆಮ್ಮ ನೇಣುಹಾಕಿಕೊಂಡು ಮರಣ ಹೊಂದಿದ ಸ್ಥಳವನ್ನು ನಮಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಮೃತಳ ಶವ ಇತ್ತು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ನನಗೆ ಈಗ ಓದಿ ಹೇಳಿದಂತೆ ನಿಪಿ-**10** ರಂತೆ ಮುಂಜಾನೆ **8-00** ಗಂಟೆಯಿಂದ **8-45** ರ ವರೆಗೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-**11** ರಂತೆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳ ಬಗ್ಗೆ ತಿಳಿದುಕೊಂಡು ಸದರಿ ಸ್ಥಳದಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಿಪಿ-**15** ರಂತೆ ನನಗೆ ನೀಡಿದ್ದ ನೋಟಿಸ್ ಆಗಿದೆ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಪೋಟೋಗಳನ್ನು ತೆಗೆಯಲಾಗಿತ್ತು ಎಂದರೆ ಸರಿಯಲ್ಲ.

ಮೃತಳ ಶವವನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಿಂದ ಮೃತಳ ಮನೆಗೆ ಸಾಗಿಸಲಾಗಿತ್ತು ಎಂದರೆ ಸರಿಯಲ್ಲ.ಮೃತಳ ಮನೆಯಲ್ಲಿ ಪೊಲೀಸರು ನನ್ನ ಮತ್ತು ಚಾಸಾ-**2** ರವರ ಸಮಕ್ಷಮ ನನಗೆ ಈಗ ಓದಿ ಹೇಳಿದಂತೆ ನಿಪಿ-**13** ರಂತೆ ಮೃತಳ ಶವ ಪಂಚನಾಮೆಯನ್ನು ದಿಃ **28-09-2023** ರಂದು ಮುಂಜಾನೆ **9-00** ಗಂಟೆಯಿಂದ **10-30** ಗಂಟೆವರೆಗೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಪಂಚನಾಮೆಯ ಸಂಗತಿಗಳನ್ನು

ತಿಳಿದುಕೊಂಡು ಆಸ್ಪತ್ರೆಯಲ್ಲಿಯೇ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಆರೋಪಿ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.